ISSN 2250-1711

॥ सत्यं ज्ञानमनन्तम् ॥

# JOURNAL OF VEDA SAMSKRITA ACADEMY

# जर्नल् आफ् वेद संस्कृत अकाडेमि

**Recognised in the UGC-CARE List**

**A NATIONAL PEER-REVIEWED RESEARCH JOURNAL**

**विश्वविद्यालय-अनुदान-आयोगेन केर सूच्यां मानिता**

**मूल्याङ्किता राष्ट्रियसंशोधनपत्रिका**

**VOLUME: XXI**

**January to June – 2023**

Editor in Chief :

**DR. GOPALKRISHNA HEGDE**

[Jyotishashastra-Dharmashastra Vidwan]

## VEDA SAMSKRITA ACADEMY (Regd.)

Formerly : Veda Samskrita Prasarinee Sabha (R.)
Regd. No. : DR : SOR : 108 : 2003-04, Dated : 30-10-2003
Registered under Societies Registration Act, of Karnataka-1960

**Registered office address :**

# 1347, Kalkod Road, HEGDE-581330, Kumta, Uttarakannada, Karnataka, India
E-mail ID : **vedasmkac@gmail.com**
Website : **www.vedasamskritaacademy.org**

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

| | | |
|---|---|---|
| Title of the Journal | : | **Journal of Veda Samskrita Academy**<br>Recognised in the UGC-CARE List<br>A National Peer-Reviewed Research Journal<br>**जर्नल् आफ् वेद संस्कृत अकाडेमि**<br>विश्वविद्यालय-अनुदान-आयोगेन केर सूच्यां मानिता<br>मूल्याङ्किता राष्ट्रियसंशोधनपत्रिका |
| **ISSN** | : | **2250-1711** |
| Editor & Publisher | : | **Dr. Gopalkrishna Hegde**<br>gopalkrishnh9@gmail.com<br>9741847399<br>Director,<br>Veda Samskrita Academy (Regd.)<br>Kalkod Road, HEGDE- 581330<br>Kumta, Uttara Kannada, Karnataka |
| web site | : | www.vedasamskritaacademy.org |
| E-mail | : | vedasmkac@gmail.com |


**All rights are Reserved with the Publisher**

**" All opinion / views expressed in the research papers are of the authors only, no way they are ascribed to the Academy"**


| | | |
|---|---|---|
| Languages | : | Samskrita, Kannada, English, Hindi |
| Imprint | : | Volume XXI, January to June – 2023 |
| Paper | : | 70gsm (B2B) and Art paper – 300gsm |
| Size of the Journal | : | A4 |
| Number of Pages | : | 518 + 14 + 3 (colour page) |
| Number of Copies | : | 200 |
| D. T. P. | : | Chanda Graphics, Kumta |
| Art works | : | Girish R. Bhat, Digital World, Kumta |
| Printing & | : | Shiva Offset Printers, Kumta |
| Binding | : | Shri Krishna Mudranalaya, Hegde |
| **Price** | : | **1000/- Rs.** |


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

| | | |
|---|---|---|
| 28. | Study of Agricultural Science in Sanskrit Literature<br>Dr. Sankar Chatterjee, Associate Professor , Cooch Behar ,W.B. | 343-346 |
| 29. | No-Soul theory of Buddha<br>Dr. Charu Das, Associate Professor, Guwahati, Assam | 347-351 |
| 30. | NEP-2020 In the light of Ancient Education System<br>Pinki Paul, Assistant Professor, Alipurduar, West Bengal | 352-355 |
| 31. | General principles of the *Mīmāṃsā* law: a psychological study<br>Mr. Supriya Roy, Assistant Professor, Murshidabad, West Bengal - 9093765087 | 356-359 |
| 32. | Divine Birth of Lord Buddha : In the light of Buddhacarita<br>Dr. Arnab Patra, Assistant Professor, Asutosh College, Kolkata, West Bengal | 360-362 |
| 33. | Concept of virtue in ancient sanskrit texts & plato's early dialogues<br>Kshitij Mohunta, PhD Scholar, SVYASA, Bengaluru | 363-367 |
| 34. | Gender mainstreaming and soap opera : Conception or Misconception<br>Deboleena Dutta, State Aided College Teacher, West Bengal, 9126703976 | 368-371 |
| 35. | Upanishad literature in the unveiling of human emotion<br>Jubin Yasmin, Assistant professor, Kolkata, West Bengal- 9832694844 | 372-375 |
| 36. | Women in post colonial twentieth century Indian english fiction : A selective and graphical study of three decades<br>Prof. Sangeeta Singh, Dept. of English, Kota, Rajasthana- 9414331103 | 376-379 |
| 37. | Brave New Women in Brave New World with Reference to Divakaruni's<br>*The Mistress of Spices*<br>Dr. J. Nasreen Banu, Assistant Professor of English, Tiruchengode, 9894553454 | 380-382 |

| | हिन्दीविभाग | |
|---|---|---|
| 1. | मैत्रेयी पुष्पा के कहानियों में स्त्री – मुक्ति संदेश<br>डा. कृष्णा डी लमाणि, सहायक प्राध्यापक, हिंदी अध्ययन विभाग, बेंगलूरु, कर्नाटक, 8618152900 | 383-387 |
| 2. | सर्वेश्वरदयाल सक्सेना की कविता एवं आलोचनात्मक संदर्भ<br>डा. एम्. अब्दुल रजाक, सहायक प्राध्यापक, बेंगलूरु, कर्नाटक, 9493405942, 8919113820 | 388-392 |
| 3. | मन्नेरवारलू जनजातिऔर समकालीन जीवन<br>डॉ. गणशेटवार साईनाथ नागनाथ, सहायक प्राध्यापक - हिन्दी विभाग, बेंगलूरू, कर्नाटक - 7598438956 | 393-397 |
| 4. | उग्र जी की कतिपय कहानियों में राष्ट्रीय चेतना के स्वर<br>डॉ. मनोज कुमार दुबे, हिंदी सहायकाचार्य, मुंबई , महाराष्ट्र, 9920287301 | 398-402 |
| 5. | अथर्ववेदीय ब्रह्मबिन्दूपनिषद् का दार्शनिक तत्त्वज्ञान<br>डॉ. प्रियंककुमार एन. रावल, सहायक अध्यापक, वल्लभ विद्यानगर, गुजरत- 7984896914 | 403-407 |
| 6. | कन्नड साहित्य में दास साहित्य और संगीत<br>डा. महमद नयास पाशा, हिन्दी विभाग, बेंगलूरु, कर्नाटक - 9632783783 | 408-411 |
| 8. | 'कोमल गांधार' नाटक में चित्रित 'नारी'<br>विनोद बाबुराव मेघशाम, बेङ्गलूरु, कर्नाटक- 9008467187 | 412-416 |

| | ಕನ್ನಡ ವಿಭಾಗ | |
|---|---|---|
| 1. | ಬೆಳ್ವೊಲನಾಡಿನ ಶಾಸನಗಳಲ್ಲಿ ಧರ್ಮ ಸಮನ್ವತೆ<br>ಡಾ. ಶರಣಪ್ಪ ಬಸಪ್ಪ ಜಗ್ಗಲ್, ಹಾವೇರಿ, ಕರ್ನಾಟಕ- 8884608967 | 417-421 |
| 2. | ವಚನ ವಿಮರ್ಶೆಗಳು : ಅಲಂಕಾರಶಾಸ್ತ್ರದ ನೆಲೆ<br>ಡಾ. ಅಂದಯ್ಯ ಅರವಟಗಿಮಠ, ಗದಗ, ಕರ್ನಾಟಕ- 7406745526 | 422-424 |
| 3. | ವಿವೇಕಾನಂದರ ಚಿಂತನೆಯಲ್ಲಿ ವರ್ಣ ಮತ್ತು 'ಜಾತಿ ವ್ಯವಸ್ಥೆ'<br>ಡಾ. ವೀಣಾ ಈ., ಗದಗ, ಕರ್ನಾಟಕ- 9113058404 | 425-429 |
| 4. | ಕನ್ನಡದಲ್ಲಿ ಪುರಾಣ ಕಾವ್ಯಗಳ ಸ್ವರೂಪ<br>ಡಾ. ಎ. ವಿ. ದೇವಾಂಗಮಠ, ಗದಗ, ಕರ್ನಾಟಕ- 9880042365 | 430-432 |


CO-ORDINATOR
IQAC
...S' Arts & Commerce College

PRINCIPAL
K. L. E Society's
Arts & Commerce College
GADAG-BETGERI-582101

Volume XXI : January to June – 2023, ISSN 2250-1711
Journal of Veda Samskrita Academy [Recognised in the UGC-CARE List]

# ವಚನ ವಿಮರ್ಶೆಗಳು : ಅಲಂಕಾರಶಾಸ್ತ್ರದ ನೆಲೆ

ಡಾ. ಅಂದಯ್ಯ ಅರವಟಗಿಮಠ
ಕನ್ನಡ ಉಪನ್ಯಾಸಕರು,
ಕೆ.ಎಲ್.ಇ ಸಂಸ್ಥೆಯ ಕಲಾ ಮತ್ತು
ವಾಣಿಜ್ಯ ಮಹಾವಿದ್ಯಾಲಯ, ಗದಗ

ಶಾಸ್ತ್ರವೆಂಬ ಹಣೆಪಟ್ಟಿಯ ಬದಲಾಗಿ ವಚನಗಳನ್ನು ಸಾಹಿತ್ಯವೆಂದೇ ಪರಿಗಣಿಸಬೇಕೆಂದು ಹಲವರ ವಾದವಾಗಿತ್ತು. ಇಂತಹ ಪ್ರಯತ್ನಗಳ ಭಾಗವಾಗಿಯೇ ವಚನ ಸಾಹಿತ್ಯ ಕುರಿತ ಅನೇಕ ಬರಹಗಾರರು ವಚನಗಳಲ್ಲಿ ಕಾಣುವ ಸಾಂಪ್ರದಾಯಿಕ ಸಾಹಿತ್ಯದ ಲಕ್ಷಣಗಳಾದ ಛಂದಸ್ಸು, ಅಲಂಕಾರ ಮುಂತಾದ ಅಂಶಗಳನ್ನು ಶೋಧಿಸುವರು. ವಚನಗಳು ಕಾವ್ಯವೆಂದು ಗುರುತಿಸಲು ಬಳಸುವ ಮೊದಲ ಮಾನದಂಡಗಳೆಂದರೆ ಅಲಂಕಾರಗಳು. ವಚನಗಳಲ್ಲಿನ ಅಲಂಕಾರಗಳ ಬಳಕೆಯ ಕುರಿತಾದ ಚರ್ಚೆಯಲ್ಲಿ ಛೇಕಾನುಪ್ರಾಸ, ವೃತ್ಯಾನುಪ್ರಾಸ, ಯಮಕಗಳಂತಹ ಶಬ್ದಾಲಂಕಾರಗಳು ಹಾಗೂ ರೂಪಕ, ಉಪಮೆ, ವ್ಯಾಜಸ್ತುತಿ, ದೃಷ್ಟಾಂತ, ಅರ್ಥಾಂತರನ್ಯಾಸ, ಶ್ಲೇಷಾ, ಸಂದೇಹಾಲಂಕಾರ, ವಿರೋದಾಭಾಸ, ಮುಂತಾದ ಅರ್ಥಾಲಂಕಾರಗಳನ್ನು ಹಲವು ವಚನಗಳ ಹಿನ್ನಲೆಯಲ್ಲಿ ವಿವರಿಸಲಾಗಿದೆ. ವಚನಗಳಲ್ಲಿ ಅಡಗಿರುವ ವಿಭಿನ್ನ ಶೈಲಿಗಳಾದ ಗಣಿತಾತ್ಮಕ, ನಿಷೇಧಾತ್ಮಕ ಜನಪದೀಯ, ಪುನರುಕ್ತಿ, ಸಂಭಾಷಣಾ, ಪ್ರಶ್ನಾರ್ಥಕ ಮೊದಲಾದವುಗಳು ಇಲ್ಲಿ ವಚನಗಳ ಆಧಾರದಿಂದ ವಿಮರ್ಶೆಗಳಲ್ಲಿ ಅರ್ಥ ವಿಸ್ತರಣೆಗೊಂಡಿವೆ.

ವಚನಗಳು ಸಹಜ ಸ್ಫೂರ್ತಿಯಿಂದ ಮೂಡಿಬಂದವುಗಳು. ಜನರಾಡುವ ದಿನಮಾತನ್ನೇ ಬಳಸಿಕೊಂಡಿದ್ದರೂ, ವಚನಕಾರರು ತಮ್ಮ ಕಾವ್ಯ ಪ್ರತಿಭೆಯಿಂದ ಭಿನ್ನ ಅಲಂಕಾರಗಳನ್ನು ಬಳಕೆ ಮಾಡಿ ಸಹೃದಯರ ಮನಸ್ಸಿಗೆ ಆಹ್ಲಾದಕರತೆ ಉಂಟಾಗುವಂತೆ ಸಾಹಿತ್ಯ ಕೃಷಿ ಮಾಡಿರುವುದನ್ನು ಬರಹಗಳು ಗುರುತಿಸಿವೆ. ವಚನಕಾರರು ಮುಖ್ಯವಾಗಿ ತಾವು ದಿನನಿತ್ಯ ಬಳಸುವ ವಸ್ತು, ಪ್ರಾಣಿಗಳನ್ನೇ ಪ್ರತಿಮೆ ಪ್ರತೀಕಗಳನ್ನಾಗಿ ತಮ್ಮ ಕೃತಿಯಲ್ಲಿ ಬಳಸಿಕೊಂಡು, ತಾವು ಹೇಳುವ ಸಂದೇಶದೊಂದಿಗೆ ಹಲವಾರು ಉಪಮೆ, ರೂಪಕ, ದೃಷ್ಟಾಂತಗಳನ್ನು ಬಳಸಿರುವುದನ್ನು ಹಲವು ವಿಮರ್ಶಕರು ಗಮನಿಸಿದ್ದಾರೆ.

ಆರ್. ಆರ್. ದಿವಾಕರ ಅವರು ವಚನಗಳಲ್ಲಿ ವ್ಯಕ್ತವಾದ ಅಲಂಕಾರಗಳ ಕುರಿತಾಗಿ ಹೆಚ್ಚಿನ ವಿವರಣೆಯನ್ನು ನೀಡಿರುವರು. ವಚನಗಳಲ್ಲಿ ಬರುವ ಶಬ್ದಾಲಂಕಾರಗಳಾದ ಪ್ರಾಸ, ಶಬ್ದ ಚಮತ್ಕಾರಗಳ ಕುರಿತು ಅವರ ಬರಹವಿದೆ. ಅವರೇ ಹೇಳುವ ಮಾತುಗಳು ಇಲ್ಲಿ ಉಲ್ಲೇಖನೀಯ. "ಪದ್ಯಕ್ಕಿಂತ ಗದ್ಯದಲ್ಲಿ ಯಾವಾಗಲೂ ಅಲಂಕಾರಗಳು ಕಡಿಮೆ. ವಚನಗಳಲ್ಲಿಯ-ಗದ್ಯವಂತೂ ಸಾಹಿತ್ಯ ದೃಷ್ಟಿಯಿಂದ ಬರೆಯಬೇಕೆಂದು ಬರೆಯಲ್ಪಟ್ಟದಲ್ಲ. ಆದುದರಿಂದ ಅವುಗಳಲ್ಲಿ ನಾವು ಅಲಂಕಾರಗಳನ್ನು ಅಪೇಕ್ಷಿಸುವ ಕಾರಣವಿಲ್ಲ. ಆದರೆ ಅರ್ಥಬೋಧವು ಚೆನ್ನಾಗಿ ಆಗಲಿಕ್ಕೆ ಲೇಖಕರ ವಿಚಾರಗಳು ಓದುಗರ ಮನಸ್ಸಿನ ಮೇಲೆ ಮುದ್ರೆಯಂತೆ ಅಚ್ಚಾಗಲಿಕ್ಕೆ ಹಲವು ಅಲಂಕಾರಗಳ ಸಹಾಯವಾದರೂ ಬೇಕೇ ಬೇಕಾಗುವದು. ಆ ಮಟ್ಟಿಗೆ ವಚನಕಾರರು ವಚನಗಳನ್ನು ಶೃಂಗರಿಸಲಿಕ್ಕೆ ಮರೆತಿಲ್ಲ. ಅಥವಾ ಆ ಮಟ್ಟಿಗೆ ವಚನಗಳಲ್ಲಿ ಅಲಂಕಾರಗಳು ಸಹಜವಾಗಿ ಬಂದಿವೆ ಎಂದು ಹೇಳಬಹುದು. ಸ್ವಯಂವರಕ್ಕೆ ಸಿದ್ಧಳಾದ ಅರಸುಗಳಂತೆ ನಾನಾ ಚಿನ್ನರತ್ನದ ವಸ್ತ್ರಾಲಂಕಾರಗಳಿಂದ ವಿಭೂಷಿತಳಾಗಿದ್ದರೂ ವಚನವಧುವು ಋಷಿ ಕನ್ನೆಯಂತೆ ತನ್ನ ನಿರ್ವಾಜ್ಯ, ನೈಸರ್ಗಿಕ ನಿಲುವಿನಿಂದಲೂ ವನ ಸುಲಭವಾದ ಹೂ ಚಿಗುರುಗಳಿಂದಲೂ ಶೋಭಿಸುತ್ತಿರುವಳು"[1] ಎನ್ನುವರು. ಮುಂದುವರೆದು ಶಬ್ದಾಲಂಕಾರಗಳಾದ ಯಮಕ, ಪ್ರಾಸಗಳು ಮತ್ತು ಅರ್ಥಾಲಂಕಾರಗಳಾದ ಉಪಮೆ, ರೂಪಕ ಮತ್ತು ಕೆಲವು ಸಂದರ್ಭಗಳಲ್ಲಿ ಉತ್ಪ್ರೇಕ್ಷೆಗಳು ವಚನಗಳಲ್ಲಿ ಕಾಣಸಿಗುವುದನ್ನು ದಿವಾಕರರು ಗುರುತಿಸುತ್ತಾರೆ.

ವಚನಗಳನ್ನು ಸಾಹಿತ್ಯವೆಂದೇ ಪರಿಗಣಿಸುವ ರಂ.ರಾ.ದಿವಾಕರವರು ವಚನಗಳಲ್ಲಿ ಬಳಕೆಯಾದ ಅಲಂಕಾರಗಳನ್ನು ಗುರುತಿಸಲು ಪ್ರಯತ್ನಿಸುತ್ತಾರೆ. ವಚನಗಳಲ್ಲಿ ಮುಖ್ಯವಾಗಿ ಬಳಕೆಯಾದ ಅಲಂಕಾರಗಳೆಂದರೆ ಅವು ಮೌಖಿಕ ಧಾರೆಯಲ್ಲಿ ಬಳಕೆಯಾದ ಶಬ್ದಾಲಂಕಾರಗಳು, ಅರ್ಥಾಲಂಕಾರಗಳೇ ಆಗಿವೆ. ಇವು ಮೌಖಿಕ ಕಾವ್ಯಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಅಲಂಕಾರಗಳೆನ್ನುವರು. ಇಂತಹವುಗಳನ್ನು ವಚನಕಾರರು ಸಾಕಷ್ಟು ಬಳಸಿದ್ದಾರೆ ಎಂದಿರುವರು.

ಪ್ರಕೃತಿಯ ವಸ್ತುಗಳಾದ ಪ್ರಾಣಿ, ಸಸ್ಯಗಳು ವಚನಗಳಲ್ಲಿ ರೂಪಕವಾಗಿ ಕಾಣುವ ಬಗೆಯನ್ನು ವಿವರಿಸುವ ಡಾ. ಎಲ್. ಬಸವರಾಜುರವರು 'ಬಸವಣ್ಣನವರ ವಚನಗಳು' ಕೃತಿಯ ಪೀಠಿಕೆಯಲ್ಲಿ ಮಹತ್ವಪೂರ್ಣವಾಗಿ ಚರ್ಚಿಸಿದ್ದಾರೆ. ಮುಂದುವರೆದು ಬಸವಣ್ಣನವರನ್ನು ಒಳಗೊಂಡಂತೆ ಇತರ ಇತರ ಅನೇಕ ವಚನಕಾರರು ತಮ್ಮ ರಚನೆಗಳಲ್ಲಿ ಬಾಹ್ಯ ಜಗತ್ತಿನ ಹಲವು ವಸ್ತು, ಪ್ರಾಣಿ, ಪಕ್ಷಿ, ಗಿಡಗಳನ್ನು ಪ್ರತಿಮೆಗಳಾಗಿ ಬಳಸಿಕೊಂಡಿದ್ದು, ಅವುಗಳಿಗೆ ವಿಶೇಷಾರ್ಥ ನೀಡಿದ್ದಾರೆ ಎನ್ನುವರು. "ಸರ್ವಸಂಪನ್ನ ಪ್ರಕೃತಿಯ ರೂಪ ರೇಖಾ ವಿನ್ಯಾಸಗಳನ್ನು ಬಸವಣ್ಣನವರು ವಿಧೇಯಕ ಅಥವಾ ನಿಷೇಧಕ ತತ್ವ ಪ್ರತಿಪಾದನೆಗಾಗಿ ಪರಿಭಾವಿಸಿ, ವಾಸ್ತವಿಕವಾಗಿ ಸಂಭಾವಿಸಿ ಅದನ್ನು ಸಾಹಿತ್ಯ ಕ್ಷೇತ್ರದಲ್ಲಿ ಅಮೂಲ್ಯ ತತ್ವ ಪ್ರತಿಮೆಗಳನ್ನಾಗಿ ಬಳಸಿದ್ದಾರೆ"[2] ಎಂದು ಹೇಳಿ ಮುಂದುವರೆದು ಗಂಧದ ಮರ, ಬಾಳೆ, ಅತ್ತಿಯ ಹಣ್ಣು, ಎಲವ, ಕಹಿಸೂರೆ, ಬೇವು. ಎಕ್ಕೆಯ ಕಾಯಿ, ಮತ್ತು ಹುಲ್ಲಿನಲ್ಲಿ ಮುಚ್ಚಿಟ್ಟ ಕೋತಿ, ಚಿನ್ನದ ಕೋತಿಯ

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

ಕೈಯ ಮಾಣಿಕ್ಯ, ಗಿಳಿ, ಮೊಲ, ನಾಯಿ, ಪಶು, ಎಳ್ಳು–ಎತ್ತು, ಜವೆ–ತ್ರಾಸು, ಕಬ್ಬು–ಮದಕರಿ, ಸಾಸವೇ–ಸಾಗರ ಮುಂತಾದವುಗಳು ಬಸವಣ್ಣನವರ ವಚನಗಳಲ್ಲಿ ಪಡೆದ ಭಿನ್ನ ಅರ್ಥ ಹಾಗೂ ಬಸವಣ್ಣನವರು ಸೂಚಿಸುವ ಅರ್ಥಗಳನ್ನು ವಿವರಿಸಿದ್ದಾರೆ.

ರೂಪಕ ಶಕ್ತಿಯನ್ನು ಬಸವಣ್ಣನವರ ವಚನಗಳಲ್ಲಿರುವ ಹುಡುಕುವ ಜಿ. ಎಸ್. ಶಿವರುದ್ರಪ್ಪನವರ ಕನ್ನಡಕ್ಕೆ ಬಸವ ನಿಧಿ ಎಂಬ ಲೇಖನದಲ್ಲಿ ಬಸವಣ್ಣನವರ ರೂಪಕ ಶಕ್ತಿಯು ವಚನಗಳಲ್ಲಿ ಹೇಗೆ ಕೆಲಸ ಮಾಡಿದೆ ಎಂಬುದನ್ನು ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ. ವಚನಗಳಲ್ಲಿ ಕಾಣಸಿಗುವ ಛಂದಸ್ಸಿನ ದೃಷ್ಟಿಯಿಂದಲೂ ಮಹತ್ವದ ಲೇಖನವಿದು. "ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮತ್ತೊಂದು ಗುಣವೆಂದರೆ ಅವರ ರೂಪಕ ವೈಭವ. ಕನ್ನಡ ಸಾಹಿತ್ಯದಲ್ಲಿ ನಾರಣಪ್ಪ– ಬಸವೇಶ್ವರ ಇವರಿಬ್ಬರ ಹಾಗೆ ಭಾಷೆಯ ಸಾಧ್ಯತೆಯನ್ನು ಸೂರೆ ಮಾಡಿದವರು ಹಾಗೂ ರೂಪಕ ನಿರ್ಮಾಣ ಮಾಡಿದವರು ವಿರಳವೆಂದೇ ಹೇಳಬೇಕು. ಒಂದು ಪಂಕ್ತಿಯಲ್ಲಿ ಒಂದೊಂದು ಚಿತ್ರಮಿನುಗುತ್ತ ನಿಲ್ಲುವದುಂಟು. ಕೆಲವೆಡೆ ಒಂದೇ ವಚನದಲ್ಲಿ ಮೂರು ನಾಲ್ಕು ಶಬ್ದ ಚಿತ್ರಗಳು ಬರುವದುಂಟು. ಮತ್ತೆ ಕೆಲವೆಡೆ ಒಂದೇ ಪ್ರತಿಮೆ ಒಂದು ವಚನದ ತುಂಬ ತುಂಬಿ ಥಳಥಳಿಸುವದೂ ಉಂಟು. ಮತ್ತೆ ಒಂದೇ ಒಂದು ಚಿತ್ರ ಮೂರು ನಾಲ್ಕು ವಚನಗಳಲ್ಲಿ ವಿಸ್ತರಿಸಿ ಸೊಗಸುವದು ಉಂಟು. ಹೀಗೆ ಈ ವಚನಗಳ ತುಂಬ ಇಂಥ ಚಿತ್ರ ಪರಂಪರೆ ಯಾರನ್ನಾದರೂ ಬೆರಗಾಗಿಸುತ್ತವೆ. ಬಸವಣ್ಣನವರ ವಚನಗಳಲ್ಲಿ ಈ ಬಗೆಯ ರೂಪಕ ಭಾಷೆ ಅಂತರಂಗದ ತೀವ್ರ ತುಮುಲಗಳನ್ನು ನಿರೂಪಿಸಿದಂತೆ, ಅವರ ಸೂಕ್ತಿ ಸದೃಶವಾದ, ಸರಳವಾದ, ನಿರಲಂಕಾರವೆಂಬಂತಹ ಮಾತುಗಳೂ ದೊರೆಯುತ್ತವೆ. ವಾಸ್ತವವಾಗಿ ಜನಭಾಷೆಯನ್ನು ವಚನ ರಚನೆಗೆ ಬಳಸಿಕೊಂಡು ಬಸವಣ್ಣನವರು ಕನ್ನಡ ಮಾಧ್ಯಮದ ಮಹತ್ತನ್ನು ಎತ್ತಿ ತೋರಿಸಿದ್ದಾರೆ. ಭಾಷೆ, ಛಂದಸ್ಸಿನ ದೃಷ್ಟಿಯಿಂದಲೂ ಅವರ ಸಾಧನೆ ಸಾಮಾನ್ಯವಾದುದೇನಲ್ಲ"[3] ಎಂದಿರುವರು.

ವಚನಕಾರರು ಹಲವು ಬಗೆಯ ರೂಪಕಗಳನ್ನು ಬಳಸಿಕೊಂಡಿದ್ದನ್ನು ಗಮನಿಸಿ, ಅಲ್ಲಿನ ಪ್ರಾಣಿ ರೂಪಕಗಳನ್ನು ವಿಶೇಷ ಚರ್ಚೆಗೆ ಒಳಪಡಿಸುವ ಸುಜನಾರವರು ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕ ಎಂಬ ಚರ್ಚೆಯಲ್ಲಿ ಅನೇಕ ವಿಶೇಷತೆಗಳನ್ನು ಗುರುತಿಸುವರು. "ಬಸವಣ್ಣನವರ ವಚನಗಳಲ್ಲಿ ಹತ್ತಾರು ಪ್ರಾಣಿ ರೂಪಕಗಳನ್ನು ಕಾಣುತ್ತೇವೆ. ಒಂದೇ ಪ್ರಾಣಿಯ ಚಿತ್ರವು ಮತ್ತೆ ಮತ್ತೆ ಆದರೆ ಭಿನ್ನಭಿನ್ನ ಭಾವಕ್ಕೆ ಪ್ರತೀಕವಾಗಿ ಬರುವದನ್ನು ಕಾಣುತ್ತೇವೆ. ಒಮ್ಮೊಮ್ಮೆ ಸಾಧಾರಣ ಸದೃಶ್ಯವಾಗಿ ಬಂದರೆ, ಮತ್ತೊಮ್ಮೆ ಯಾವದೋ ಭಾವ ಸಂಕೇತವಾಗಿ ಬರುತ್ತದೆ. ಇಲ್ಲಿ ಅವುಗಳ ಶ್ರೇಣಿಯನ್ನು ಆ ಶ್ರೇಣಿಯ ಸೌಂದರ್ಯವನ್ನು ಕಾಣುತ್ತೇವೆ"[4] ಮುಂದುವರೆದು ಕುರಿ, ಗೋಸುಂಬೆ, ಸಿಂಹ, ನಾಯಿ, ಕರಿ, ಮರ್ಕಟ, ಕಾಗೆ, ಗಿಳಿ, ಕಪ್ಪೆ, ಕುದುರೆ, ಇಲಿ, ಪಶು–ಗಾಣದೆತ್ತು, ಬ್ರಮರ, ಹಾವು, ಬಕಪಕ್ಷಿ, ನೊಣ, ಇವುಗಳು ಬಸವಣ್ಣನವರ ಅನೇಕ ವಚನಗಳಲ್ಲಿ ಪಡೆದ ಅರ್ಥಗಳನ್ನು ವಿವರಿಸುತ್ತಾರೆ. ಮುಂದುವರೆದು ಬಸವಣ್ಣನ ವಚನಗಳಲ್ಲಿ ಬರುವ ರೂಪಕಗಳೆಲ್ಲವೂ ಒಂದೇ ವರ್ಗದವು ಎಂದು ಯಾರೂ ಭಾವಿಸರು. ಸಾದೃಶ್ಯವಾಗಿ ಬರತಕ್ಕ ರೂಪಕಗಳುಂಟು. ಸಾದೃಶ್ರೀ ಆಗತಕ್ಕವೂ ಉಂಟು. ಪ್ರತಿಮೆಗಳಾಗುವ ರೂಪಕಗಳೂ ಉಂಟು. ಹೀಗಿದ್ದರೂ ಪ್ರಾಣಿಗಳನ್ನು ಪ್ರಧಾನತಃ ಮಾನವನ ವಿವಿಧ ಪ್ರಾಣಿ ಸ್ವಭಾವಗಳನ್ನು ವ್ಯಕ್ತಗೊಳಿಸಲು ಮಾತ್ರ ಬಳಸಿಕೊಳ್ಳಲಾಗಿದೆ. ನಾಯಿ, ಹಾವು ಇವೆರಡೂ ಕೂಡ ಏನೂ ಒಳ್ಳೆಯ ಗುಣಕ್ಕೆ ರೂಪಕಗಳಾಗಿ ಬಂದಿಲ್ಲ. ಆದರೆ ಆಧ್ಯಾತ್ಮಿಕ ಪ್ರಪಂಚದಲ್ಲಿ ನಾಯಿಗೆ ಧರ್ಮದ ಪ್ರತಿನಿಧಿ ಎಂಬೆಲ್ಲ ವಿಶೇಷ ಭಾವಾರ್ಥಗಳಿವೆ. ನಾಗರಹಾವು ಕುಂಡಲಿನಿ ಶಕ್ತಿಯ ಸಂಕೇತವಾಗುತ್ತದೆ. ಅನಂತತೆಯ ಸಂಕೇತವಾಗುತ್ತದೆ. ಒಟ್ಟಿನಲ್ಲಿ ಹೇಳುವದೇನೆಂದರೆ ಪ್ರಾಣಿಗಳನ್ನು ದಿವ್ಯಾನುಭವಗಳ ಪ್ರತೀಕ ಪ್ರತಿಮೆಗಳನ್ನಾಗಿ ಮಾಡಿಕೊಳ್ಳಬಹುದು ಎಂದು. ಆದರೆ ಈ ವಚನಗಳ ವಲಯವೇ ಬೇರೆ. ಇಲ್ಲಿ ಪ್ರಾಣಿಗಳು ಮುಖ್ಯವಾಗಿ ಪ್ರಾಣಿತನದ ಪ್ರತೀಕವಾಗಿ ಮಾತ್ರ ಬಂದಿವೆ. ಹಾಗೆ ಆ ರೂಪಕಗಳಲ್ಲಿ ಮಾನವ ಹೃದಯದ ಒಳತೋಟಿಯ ಚಿತ್ರಣ ಸ್ಪಷ್ಟವಾಗಿದೆ ಎನ್ನುವ ಮೂಲಕ ವಚನಗಳಲ್ಲಿ ರೂಪಕಗಳಿಗಿರುವ ಹಲವು ಭಿನ್ನತೆಗಳನ್ನು ಗುರುತಿಸುತ್ತಾರೆ.

ಅಲಂಕಾರದ ಪ್ರಕಾರವಾದ ಅರ್ಥಾಲಂಕಾರದಲ್ಲಿನ ಪ್ರತಿಮೆ–ಪ್ರತೀಕಗಳು ವಚನ ಸಾಹಿತ್ಯದಲ್ಲಿ ಬಳಕೆಯಾದ ಬಗೆಯನ್ನು ಹುಡುಕುವ ಎಚ್. ತಿಪ್ಪೇರುದ್ರಸ್ವಾಮಿಗಳು ತಮ್ಮ ವಚನಸಾಹಿತ್ಯದಲ್ಲಿ ಪ್ರತಿಮೆ ಮತ್ತು ಪ್ರತೀಕಗಳು ಎಂಬ ಲೇಖನದಲ್ಲಿ ಅನೇಕ ವಿಶೇಷ ಸಂಗತಿಗಳನ್ನು ವಿವರಿಸುವರು. ವಚನಗಳ ಅಲಂಕಾರಿಕ ಅಧ್ಯಯನದಲ್ಲಿ ಮಹತ್ವವೆನಿಸುವ ಈ ಲೇಖನದಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯ ಮಿಮಾಂಸೆಯ ಹಿನ್ನಲೆಯಲ್ಲಿ ವಚನಗಳಲ್ಲಿನ ಪ್ರತಿಮೆ–ಪ್ರತೀಕಗಳ ಕುರಿತಾಗಿ ವಿವರಿಸುತ್ತಾರೆ.

ಪಿ. ವಿ. ನಾರಾಯಣ ಅವರ 'ವಚನಗಳಲ್ಲಿ ಪ್ರಾಣಿ ಪಕ್ಷಿಗಳು' ಎಂಬ ಲೇಖನ ಮಹತ್ವವಾದದ್ದು. ಇಲ್ಲಿ ಪ್ರಾಣಿ ಪಕ್ಷಿಗಳು ವಚನಗಳಲ್ಲಿ ಪಡೆದ ಭಿನ್ನ ಅರ್ಥಗಳನ್ನು ವಿವರಿಸುತ್ತಾರೆ. "ವಚನಕಾರರು ಸಮಾಜದಲ್ಲಿ ಕಂಡ ವಿಷಯಗಳನ್ನು ತಮ್ಮ ಅಂತರಾಳದಲ್ಲಿ ತುಡಿದ ಭಾವನೆಗಳನ್ನು ಸಮರ್ಪಕವಾಗಿ ತಿಳಿಸಲು ಅವರು ನಿರ್ಮಾಣ ಮಾಡಿದ ರೂಪಕಗಳು ಯಾರನ್ನಾದರೂ ಬೆರಗುಗೊಳಿಸುವಂತಹದು. ಪ್ರಾಣಿಗಳ ಸ್ವಭಾವವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದ ವಚನಕಾರರಿಗೆ ಅವುಗಳನ್ನೇ ರೂಪಕಗಳನ್ನಾಗಿ ಬಳಸಿಕೊಂಡು ವಿಷಯ ನಿರೂಪಣೆ ಮಾಡುವದು ಅನುಕೂಲಕರವಾಯಿತು. ಅನೇಕ ಬಗೆಯ ಅನುಭವಗಳಿಗೆ, ಭಾವನೆಗಳಿಗೆ ಪ್ರಾಣಿಗಳ ಪ್ರತಿಮೆಯನ್ನೊಡ್ಡಿ ಪ್ರಾಣಿಗಳ ಬಗೆಗಿನ ತಮ್ಮ ಸೂಕ್ಷ್ಮಾವಲೋಕನವನ್ನು ತೋರಿಸಿಕೊಂಡಿರುವರಲ್ಲದೆ ಮಾನವ ಸ್ವಭಾವವನ್ನು ಪ್ರಾಣಿ ರೂಪಕಗಳ ಮೂಲಕ ಕುಶಲವಾಗಿ ವ್ಯಾಖ್ಯಾನಿಸುತ್ತಾರೆ. ಶ್ರೇಷ್ಠ – ನೀಚ, ಹಿರಿದು–ಕಿರಿದು, ದುಷ್ಟ–ಸಾಧು, ಅಂತರಂಗ–ಬಹಿರಂಗ, ಸಹಜ–ಕೃತಕ, ಒಳಿತು–ಕೆಡಕು, ತಿಳಿವು–ಮರೆವು ಈ ಅನೇಕ ವಿರೋಧಗಳ ನಿರೂಪಣೆಗೆ ಅವರು ಒಡ್ಡುವ ಪ್ರಾಣಿ

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E Society's
Arts & Commerce College
GADAG-BETGERI-582101

ರೂಪಕಗಳು ಅಭ್ಯಾಸಿಯನ್ನು ಚಕಿತಗೊಳಿಸುತ್ತವೆ"[5] ಎಂದು ಹೇಳಿ ವಚನಕಾರರು ತಮ್ಮ ವಚನಗಳಲ್ಲಿ ಉಲ್ಲೇಖಿತವಾದ ಅನೇಕ ಪ್ರಾಣಿಗಳು, ಬಿಂಬಿತಗೊಂಡ ರೀತಿ, ರೂಪ ಸಾದೃಶ್ಯ, ಅಲ್ಲಿ ಪ್ರತಿನಿಧಿಸುವ ಅರ್ಥ, ವಿಶೇಷಾರ್ಥ, ಧ್ವನಿ ಸಾದೃಶ್ಯಗಳನ್ನು ವಿವೇಚಿಸಿದ್ದಾರೆ. ವಚನಗಳಲ್ಲಿ ಬಳಕೆಯಾದ ಪ್ರಾಣಿರೂಪಗಳನ್ನು ವಿವರಿಸುವಲ್ಲಿ ಬರಹ ಯಶಸ್ವಿಯಾಗಿದೆ.

ಬಸವಣ್ಣನವರ ವಚನಗಳನ್ನು ಸಾಹಿತ್ಯಕ ನೋಟಕ್ರಮದಲ್ಲಿ ಅಧ್ಯಯನ ನಡೆಸುವ ಕೆ. ಕೃಷ್ಣಮೂರ್ತಿಯವರು ತಮ್ಮ ಬಸವಣ್ಣನವರ ವಚನಗಳ ಮೀಮಾಂಸೆ ಎಂಬ ಕೃತಿಯಲ್ಲಿ ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನಲೆಯಲ್ಲಿ ಬಸವಣ್ಣನವರ ವಚನಗಳನ್ನು ನೋಡಿರುವರು. ಮುಖ್ಯವಾಗಿ ರಸತತ್ವ, ವಾಕ್‌ತತ್ವ, ರೂಪತತ್ವಗಳ ಹಿನ್ನಲೆಯಲ್ಲಿ ವಚನಗಳನ್ನು ನೋಡಿದ್ದಾರೆ. ವಚನಗಳನ್ನು ಅಲಂಕಾರಿಕ ನೆಲೆಯಿಂದಲೂ ಗಮನಿಸುವ ಅವರು 'ರೂಪತತ್ವ' ಎಂಬ ಭಾಗದಲ್ಲಿ ರೂಪಕ, ಉಪಮೆ, ಪ್ರಾಸಗಳು, ದೃಷ್ಟಾಂತ, ವಿರೋಧಾಭಾಸ, ಶ್ಲೇಷ, ವಿಷಮಾಲಂಕಾರ, ಕವಿಸಮಯ ಕುರಿತು ಮಹತ್ತರ ಚರ್ಚೆ ನಡೆಸಿದ್ದಾರೆ. ಸಂಸ್ಕೃತ ವಿದ್ವಾಂಸರಾಗಿದ್ದ ಕೃಷ್ಣಮೂರ್ತಿಯವರು ಭಾರತೀಯ ಕಾವ್ಯಮಿಮಾಂಸೆಯ ಅನೇಕ ಅಂಶಗಳು ಬಸವಣ್ಣನವರ ವಚನಗಳಲ್ಲಿರುವದನ್ನು ಗುರುತಿಸುತ್ತಾರೆ.

ವಚನಗಳಲ್ಲಿ ಬಳಕೆಗೊಂಡಿರುವ ಪ್ರತಿಮೆಗಳನ್ನು ಒಂದಡೆ ಸಂಗ್ರಹಿಸುವ ಉದ್ದೇಶ ಹೊಂದಿದ ಶ್ರೀಮತಿ ಉಷಾ ಕಿರಣ ಅವರು 'ವಚನಗಳಲ್ಲಿ ಪ್ರತಿಮೆ' ಎಂಬ ಕೃತಿಯಲ್ಲಿ ಮಹತ್ವದ ಕಾರ್ಯ ಮಾಡಿದ್ದಾರೆ. ವಚನಗಳನ್ನು ಪ್ರತಿಮಾತ್ಮಕ ಅಧ್ಯಯನದ ಹಿನ್ನಲೆಯಲ್ಲಿ ಗಮನಿಸುವ ಇವರು ಸುಮಾರು ಹತ್ತೊಂಬತ್ತು ಪುಟಗಳ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಶರಣರ ಪ್ರತಿಮಾಪರವಾದ ನಿಲುವನ್ನು ವಿವರಿಸುವರು. ಮುಂದುವರೆದು ಪ್ರಾಣಿ ಪ್ರತಿಮೆಗಳು, ಸಸ್ಯ ಪ್ರತಿಮೆಗಳು, ಧಾರ್ಮಿಕ ಪ್ರತಿಮೆಗಳು, ಸಾಮಾಜಿಕ ಪ್ರತಿಮೆಗಳು, ಎಂದು ವಿಂಗಡಿಸಿ, ಅನೇಕ ಉಪ ವಿಭಾಗಗಳಾಗಿಯೂ ವಿವರಿಸುತ್ತಾರೆ. "ಪ್ರತಿಮೆಗಳ ವೈವಿಧ್ಯತೆ ಜೀವನದ ಹಲವು ಹಂತಗಳನ್ನು ವ್ಯಾಪಿಸಿಕೊಂಡಿದೆ. ದೃಶ್ಯಗುಣಗಳನ್ನು ಹೊಂದಿರುವ ಅಸಂಖ್ಯಾತ ಪ್ರತಿಮೆಗಳು ಅಂತರಂಗದ ಕಣ್ಣೆದುರಿಗೆ ಒಂದು ಹೊಸ ಲೋಕವನ್ನೇ ತೆರೆಯುತ್ತವೆ. ಅಲೆಯುವ ಮನಸ್ಸನ್ನು ಚಿಂತನೆಗೆ ಹಚ್ಚುತ್ತವೆ. ಅಂತರಂಗವನ್ನು ಭೇದಿಸಿ ಟೀಕಿಸಿ ಬಯಲು ಮಾಡುತ್ತವೆ"[6] ಎಂದು ವಚನಗಳಲ್ಲಿನ ಪ್ರತಿಮೆಗಳ ಮಹತ್ತನ್ನು ಸಾರುತ್ತಾರೆ.

ಪಾರಂಪರಿಕ ತಿಳಿವು, ವಚನಗಳ ಸಾಂಪ್ರದಾಯಿಕ ವ್ಯಾಖ್ಯಾನದ ಅರಿವು, ಅಧುನಿಕ ಸಾಹಿತ್ಯ ಪರಿಕಲ್ಪನೆಗಳನ್ನು ತಮ್ಮ ಬರಹದಲ್ಲಿ ಬಳಸುವ ಸಿ. ವ್ಹಿ. ಪ್ರಭುಸ್ವಾಮಿಮಠ ಅವರು ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ ಕೃತಿಯಲ್ಲಿ 'ರೂಪ ಮತ್ತು ಆಕೃತಿ' ಎಂಬ ವಿಂಗಡನೆಯಲ್ಲಿ ಬಸವಣ್ಣನವರು ಬಳಸುವ ಉಪಮೆ, ದೃಷ್ಟಾಂತ, ಪ್ರತಿಮೆಗಳನ್ನು ಕುರಿತು ವಿವರಿಸುತ್ತಾರೆ. 'ರಚನೆಯ ಒಳರೂಪಿಕೆಗಳು' ಎಂಬಲ್ಲಿಯೂ ಅನುಪ್ರಾಸ, ಶ್ಲೇಷ, ಆದಿಪ್ರಾಸ, ಅಂತ್ಯಪ್ರಾಸಗಳನ್ನು ಕುರಿತಾಗಿ ಗಮನ ಹರಿಸಿದ್ದಾರೆ.

ಮುಖ್ಯವಾಗಿ ಅಲಂಕಾರಗಳ ಹಿನ್ನಲೆಯಲ್ಲಿ ವಚನಗಳನ್ನು ನೋಡಿದ ಹಲವರು ವಚನಗಳಲ್ಲಿ ಅಲಂಕಾರಗಳು ಸಹಜವಾಗಿಯೇ ಮೂಡಿಬಂದುದ್ದನ್ನು ಗುರುತಿಸುತ್ತಾರೆ. ಅಲಂಕಾರಗಳ ಮಹತ್ವದೊಂದಿಗೆ ವಚನಗಳ ಸಾಹಿತ್ಯಿಕ ಮಹತ್ವವನ್ನು ಸಹ ಹಲವರು ವಿವೇಚಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಬಳಕೆಯಾಗಿರುವ ಮುಖ್ಯ ಅಲಂಕಾರಗಳನ್ನು ಪಟ್ಟಿಮಾಡುವಾಗ ದೃಷ್ಟಾಂತ, ರೂಪಕ, ಉಪಮೆ, ಪ್ರತಿಮೆ-ಪ್ರತೀಕಗಳು. ಹಾಗೂ ಕೆಲವಡೆ ಅನುಪ್ರಾಸ, ಶ್ಲೇಷ, ಪ್ರಶ್ನಾರ್ಥಕ, ಪ್ರಾಸ ಮುಂತಾದವುಗಳನ್ನು ಗುರುತಿಸಲಾಗಿದೆ. ಪ್ರಾರಂಭದಲ್ಲಿನ ಬರಹಗಳು ವಚನಗಳಲ್ಲಿ ಅಲಂಕಾರಗಳನ್ನು ಗುರುತಿಸುವ ಕೆಲಸ ಮಾತ್ರ ಮಾಡುತ್ತಿದ್ದವು. ನಂತರದಲ್ಲಿ ಅವುಗಳ ಮಹತ್ವವನ್ನು ವಿವರಿಸುವ ಅಧ್ಯಯನಗಳು ಕಾಣುವವು.

**ಅಡಿ ಟಿಪ್ಪಣಿಗಳು :**

1. ಆರ್. ಆರ್. ದಿವಾಕರ, ವಚನಶಾಸ್ತ್ರ ರಹಸ್ಯವು, ಪುಟ-164
2. ಎಲ್. ಬಸವರಾಜು, ಬಸವಣ್ಣನವರ ವಚನಗಳು, ಪೀಠಿಕೆ, ಪುಟ-28
3. ಶಿವರುದ್ರಪ್ಪ ಜಿ. ಎಸ್, ಕನ್ನಡಕ್ಕೆ ಬಸವನಿಧಿ, ಪ್ರಬುದ್ಧ ಕರ್ನಾಟಕ, 42-1, ಮಟ-81
4. ಸುಜನಾ, ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕಗಳು, ಪ್ರಬುದ್ಧ ಕರ್ನಾಟಕ, 42-2, ಮಟ-114
5. ನಾರಾಯಣ ಪಿ. ವಿ, ವಚನಗಳಲ್ಲಿ ಪ್ರಾಣಿ ಪಕ್ಷಿ ರೂಪಕಗಳು, ವಚನ ಸಾಹಿತ್ಯ ಸಾಂಸ್ಕೃತಿಕ ಅಧ್ಯಯನ, ಪು-58
6. ಉಷಾ ಕಿರಣ್, ವಚನಗಳಲ್ಲಿ ಪ್ರತಿಮೆಗಳು, ಪ್ರಸ್ತಾವನೆ, ಪು-13

**ಪರಾಮರ್ಶನ ಕೃತಿಗಳು :**


1. ಕೃಷ್ಣಮೂರ್ತಿ ಕೆ, ಬಸವಣ್ಣನವರ ವಚನ ಮೀಮಾಂಸೆ, ಡಾ. ಕೆ ಕೃಷ್ಣಮೂರ್ತಿ ಸಂಸ್ಕೃತ ಸಂಶೋಧನಾ ಪ್ರತಿಷ್ಠಾನ, ಬೆಂಗಳೂರು, 2010
2. ಕೃಷ್ಣಮೂರ್ತಿ ಕೆ, ಬಸವಣ್ಣನವರ ವಚನಗಳ ಮೀಮಾಂಸೆ, ಡಾ. ಕೆ. ಕೃಷ್ಣಮೂರ್ತಿ ಪ್ರತಿಷ್ಠಾನ, ಬೆಂಗಳೂರು, 1998
3. ಗೋವಿಂದರಾಜ ಗಿರಡ್ಡಿ, ವಚನ ವಿನ್ಯಾಸ, ಮನೋಹರ ಗ್ರಂಥಮಾಲಾ ಧಾರವಾಡ, 2016
4. ತಿಪ್ಪೇರುದ್ರಸ್ವಾಮಿ ಎಚ್, ವಚನ ಸಾಹಿತ್ಯ ವೈಚಾರಿಕ ಅಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2004
5. ಚಂದ್ರಶೇಖರ ವಸ್ತ್ರದ, ನಿರ್ವಚಣ, ವೀರಶೈವ ಅಧ್ಯಯನ ಸಂಸ್ಥೆ ಗದಗ, 1999
6. ದಿವಾಕರ ಆರ್. ಆರ್, ವಚನಶಾಸ್ತ್ರ ರಹಸ್ಯ, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ, 1968


************

CO-ORDINATOR
IQAC
...S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101